1	2	3	4	5	6	7	8	9
	ಚಿತ್ತಾಪುರ ತಾ.							
49.	ಸಂಸದರ ನಿಧಿ		ಶಾಲಾ ಕೊಠಡಿ ನಿರ್ಮಾಣ ವಾಯ್ಯಾತಾಂಡ್ಯ	1	1	0	0	
			ಒಟ್ಟು	49	25	23	1	

ಆರಕಲಗೂಡು ತಾಲ್ಲೂಕು ಗಂಗೂರು ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿ ಕುರಿತು

442 (963) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಆರಕಲಗೂಡು ತಾಲ್ಲೂಕು ಗಂಗೂರು ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

2. ಕಾಮಗಾರಿಗೆ ನಿಗದಿಪಡಿಸಿರುವ ಅನುದಾನ ಎಷ್ಟು;

3. ಕಾಮಗಾರಿ ವಿಳಂಬವಾಗಲು ಕಾರಣವೇನು;

4. ಕಾಮಗಾರಿ ವಿಳಂಬಕ್ಕೆ ಕಾರಣವಾಗಿರುವವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

5. ಕಾಮಗಾರಿ ಪುನರಾರಂಭಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

6. ಎಷ್ಟು ಅವಧಿಯೊಳಗೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಆರಕಲಗೂಡು ತಾಲ್ಲೂಕು, ಗಂಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡದ ಕಾಮಗಾರಿಯನ್ನು 92-93ರಲ್ಲಿ ಪ್ರಾರಂಭಿಸಲಾಯಿತು.

2. 9.85 ಲಕ್ಷ ರೂಪಾಯಿಗಳು

3. 1992-93ರಲ್ಲಿ ಮಂಜೂರಾದ ಅಂದಾಜು ಪಟ್ಟಿಯದರ 9.85 ಲಕ್ಷ. ವರ್ಷವಾರು ಅನುದಾನ ಬಿಡುಗಡೆಯ ಕೊರತೆಯಿಂದ ಕಾಮಗಾರಿ ವಿಳಂಬವಾಗಿದೆ.

4. ಈ ಕಾಮಗಾರಿಯು ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಮೇಲೆ ಅವಲಂಬಿಸಿರುತ್ತದೆ.

5. 1992-93ರಲ್ಲಿ ಮಂಜೂರಾದ ಅಂದಾಜನ್ನು ಪರಿಷ್ಕರಿಸಿ ಹೊಸ ದರದಂತೆ ಅಂದಾಜು ತಯಾರಿಸಿದ್ದು ಉಳಿಕೆ ಕಾಮಗಾರಿಗೆ ರೂ.9.5 ಲಕ್ಷದ ಅಂದಾಜು ಪಟ್ಟಿಗೆ ಆಡಳಿತಾತ್ಮಕ

ಅನುಮೋದನೆ ಪಡೆಯಲು ಕ್ರಮ ತೆಗೆದುಕೊಂಡಿದ್ದು, ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ತಾಂತ್ರಿಕ ಮಂಜೂರಾತಿ ಹಾಗೂ ಟೆಂಡರ್ ಕರೆದು ಕಾಮಗಾರಿ ಪ್ರಾರಂಭಿಸಲಾಗುವುದು.

6. ಪೂರ್ತಿ ಅನುದಾನವನ್ನು ಜಿಲ್ಲಾ ಪಂಚಾಯತ್ ಅನುದಾನದಲ್ಲಿ ಹೊಂದಿಸಿಕೊಂಡು ನಂತರ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಸಂಬಂಧಪಟ್ಟವರಿಗೆ ಹಸ್ತಾಂತರಿಸಲಾಗುವುದು.

ಪಿರಿಯಾ ಪಟ್ಟಣ ತಾಲ್ಲೂಕು ಕಣಗಾಲು ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ

443 (974) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಗ್ರಾಮೀಣಾ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪಿರಿಯಾಪಟ್ಟಣ ತಾಲ್ಲೂಕು ಕಣಗಾಲು ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿರುವ ಕುಡಿಯುವ ನೀರಿನ ಯೋಜನೆ ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ;

2. ಇಲ್ಲದಿದ್ದಲ್ಲಿ, ಸಮರ್ಪಕವಾಗಿ ಕೆಲಸ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು;

3. ಹಾಲಿ ವ್ಯವಸ್ಥೆಯಲ್ಲಿನ ಕೊಳವೆ ಬಾವಿಯ ನೀರು ಕಲುಷಿತ ನೀರಾಗಿದ್ದು ಸಾರ್ವಜನಿಕರು ಸಲ್ಲಿಸಿರುವ ದೂರು ಸರ್ಕಾರದ ಮುಂದಿದೆಯೇ?

4. ಹಾಗಿದ್ದಲ್ಲಿ, ಹೊಸದಾಗಿ ಕೊಳವೆ ಬಾವಿ ಕೊರೆಸುವ ಯೋಜನೆ ಸರ್ಕಾರದ ಮುಂದಿದೆಯೇ;

5. ಇದ್ದಲ್ಲಿ, ಯಾವಾಗ ಕೊರೆಸಿಕೊಡಲಾಗುವುದು; ವಿವರ ನೀಡುವುದು?

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

1. ವಿಶ್ವಬ್ಯಾಂಕ್ ಸಹಾಯದಿಂದ ಕಣಗಾಲು ಗ್ರಾಮದಲ್ಲಿ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು ಫೆಬ್ರವರಿ-2000 ರ ಮಾಹೆಯಲ್ಲಿ ಕಾರ್ಯಾರಂಭಗೊಂಡಿರುತ್ತದೆ ಮತ್ತು ಪ್ರಾಯೋಗಿಕ (Trail Run) ಅವಧಿಯ ನಂತರ ದಿನಾಂಕ 10-05-2001 ರಂದು ಗ್ರಾಮ ನೀರು ಸರಬರಾಜು ಸಮಿತಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಹಸ್ತಾಂತರಿಸಲಾಗಿರುತ್ತದೆ. ಈಗ ಸದರಿ ಯೋಜನೆಯನ್ನು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು ನಿರ್ವಹಿಸುತ್ತಿರುವುದಿಲ್ಲ.

2. ಕಲುಷಿತಗೊಂಡಿದೆಯೆಂಬ ಕಾರಣದಿಂದ ಗ್ರಾಮಸ್ಥರು ಸದರಿ ನೀರನ್ನು ಉಪಯೋಗಿಸಲು ಸಿದ್ದರಿರುವುದಿಲ್ಲ. ಆದ್ದರಿಂದ ಹೊಸದಾಗಿ ಬೋರ್‌ವೆಲ್ ಕೊರೆಯಲು ಜಿಲ್ಲಾ ಪಂಚಾಯತ್‌ನಲ್ಲಿ ಪ್ರಸ್ತಾವನೆ ಇದ್ದು, ನೀರಿನ ಮೂಲವನ್ನು ಗುರುತಿಸಲಾಗಿದೆ.

3. ಕಣಗಾಲು ಗ್ರಾಮದ ಯೋಜನೆಯಡಿ ಒದಗಿಸಲಾದ ನೀರಿನ ಮೂಲಗಳ ಗುಣಮಟ್ಟ, ಸಮರ್ಪಕವಾಗಿರುವುದಿಲ್ಲವೆಂದು ಗ್ರಾಮಸ್ಥರಿಂದ ಸರ್ಕಾರಕ್ಕೆ ಮನವಿ ಬಂದಿರುತ್ತದೆ. ಆದುದರಿಂದ